# ಫಖ್ತೂನರ ಚಳುವಳಿ

**ಗೋರೂರು ರಾಮಸ್ವಾಮಯ್ಯಂಗಾರ್**

ಮೊನ್ನೆ ಸೋವಿಯಟ್ ನಾಯಕರಾದ ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರು ಅಫಘಾನಿಸ್ತಾನಕ್ಕೆ ಭೇಟಿಯಿತ್ತಾಗ, ಫಖ್ತೂನರ ಚಳವಳಿಗೆ ಸಹಾನುಭೂತಿ ತೋರಿಸಿ ಅವರು ಕೊಟ್ಟ ಹೇಳಿಕೆಯಿಂದ ಪಾಕಿಸ್ತಾನದ ಕಣ್ಣು ಕೆಂಪಾಯಿತು. ಪಾಕಿಸ್ತಾನ ಅಫಘಾನಿಸ್ತಾನದ ಮೇಲೆ ರೇಗುವುದಿರಲಿ ಭಾರತದ ಮೇಲೆ ಸಹ ಅಸಮಾಧಾನವನ್ನು ಸೂಚಿಸಿತು. ಸ್ವತಂತ್ರವಾಗಿರಬೇಕೆಂಬ ಫಖ್ತೂನರ ಚಳುವಳಿ ಇಂದಿನದಲ್ಲ. ಇದು ಪಠಾಣಿಸ್ಥಾನ, ಫಖ್ತೂನಿಸ್ಥಾನ ಪರದೇಶಿಯರೇ ದೂರ ಸರಿಯಿರಿ ಇದು ಗಡಿನಾಡಿನ ಎಲ್ಲ ಹೃಯಯಗಳಲ್ಲಿಯೂ ಕಬಾ ಇಲಿಗಳ ಇಲಾಖೆಯಲ್ಲಿಯೂ ಪ್ರತಿಧ್ವನಿತವಾಗುತ್ತಿದೆ.

ಎಲ್ಲ ಸ್ವಾತಂತ್ರ್ಯ ಚಳುವಳಿಗೂ, ಪರರಾಷ್ಟ್ರದವರು ಆ ನಾಡನ್ನು ಆಕ್ರಮಿಸಿರುವುದೇ ಕಾರಣವಾಗಿರುವಂತೆ ಫಖ್ತೂನರ ಚಳುವಳಿಗೂ ಇಂಗ್ಲಿಷರು ಭಾರತವನ್ನು ಸ್ವಾಧೀನಪಡಿಸಿಕೊಂಡುದೇ ಕಾರಣವಾಯಿತು. ಭಾರತದ ರಕ್ಷಣೆಗಾಗಿ ಆಂಗ್ಲೇಯರು ಅನೇಕ ಸಲ ಅಫ್ಘಾನಿಸ್ಥಾನದ ಮೇಲೆ ದಂಡೆತ್ತಿ ಹೋಗಬೇಕಾಯಿತು. ಇಬ್ಬರಿಗೂ ಸೋಲು ಗೆಲುವುಗಳು ಆದ ಮೇಲೆ ಗಡಿನಾಡಿನ ಮೇಲೆ ಆಂಗ್ಲೇಯರ ಪ್ರಭುತ್ವ ಸ್ಥಾಪಿತವಾಯಿತು. ಮತ್ತು ಅದರ ಸೀಮಾ (ಗಡಿ) 'ಡ್ಯೂರೆಂಡ್ ರೇಖೆ' ಎಂದು ಅಫ್ಘಾನಿಗಳೂ ಆಂಗ್ಲೇಯರೂ ಒಪ್ಪಿದ್ದರು. 'ಡ್ಯೂರೆಂಡ್ ರೇಖೆ'ಗೂ ಮತ್ತು ಅಫ್ಘಾನಿಸ್ಥಾನದ ಗಡಿಗೂ ಮಧ್ಯದ ಗುಡ್ಡಗಾಡಿನ ಪ್ರದೇಶ ಯಾರಿಗೂ ಸೇರದ ಪ್ರದೇಶವೆಂದು ಪರಿಗಣಿಸಲ್ಪಟ್ಟಿತು. ಆದರೆ ಅಂದಿನಿಂದಲೂ ಪಠಾಣರು 'ಡ್ಯೂರೆಂಡ್' ರೇಖೆಯನ್ನು ಒಪ್ಪಿಲ್ಲ. ಒಟ್ಟು ಗಡಿನಾಡೆಲ್ಲ ಪಠಾಣಿಸ್ಥಾನವೆಂದು ಅವರು ಹೇಳುತ್ತಲೇ ಬಂದಿದ್ದಾರೆ.

ಅನೇಕ ಅಫ್ಘನ್ ಯುದ್ಧಗಳನಂತರ 'ಡ್ಯೂರೆಂಡ್ ರೇಖೆ'ಯನ್ನು ಸ್ಥಾಪಿಸಿದರೂ ಗಡಿನಾಡಿದಲ್ಲಿ ಇಂಗ್ಲಿಷರಿಗೆ ಒಂದು ಗಳಿಗೆಯೂ ಶಾಂತಿ ಇರಲಿಲ್ಲ. ನಿತ್ಯ ದಂಗೆಗಾರರ ಗುಂಡುಗಳು ಹಾರುತ್ತಲೇ ಇದ್ದವು. ಸಾಮ್ರಾಜ್ಯಶಾಹಿ ಮನೋಭಾವದ ಆಂಗ್ಲೇಯರು ಅಲ್ಲಿ ಪದೇ ಪದೇ ಸೈನ್ಯಾಚರಣೆ ನಡೆಸುತಿದ್ದರು. ಆಕಾಶ ವಿಮಾನದಿಂದ ಸಹ ಬಾಂಬುಗಳನ್ನು ಹಾಕಿ ಜನತೆಯನ್ನು ಕೊಂದರು. ಆ ವಿವೇಕರಹಿತ ಕೊಲೆಗಳಲ್ಲಿ ಸ್ತ್ರೀ ಪುರುಷರೆಲ್ಲ ಸತ್ತರು. ಆದರೆ ದೇಶಭಕ್ತಿ ಎಂಬ ಮರ ಹುತಾತ್ಮರ ರಕ್ತದಿಂದ ಬೆಳೆಯುವುದಷ್ಟೆ. ಗಡಿನಾಡಿನಲ್ಲಿ ಆಂಗ್ಲೇಯ ಸೈನಿಕರ ದಬ್ಬಾಳಿಕೆ ಹೆಚ್ಚಿದಷ್ಟು ಫಖ್ತೂನಿಸ್ಥಾನವನ್ನು ಸ್ಥಾಪಿಸಬೇಕೆಂಬ ಪಠಾಣರ ಬಯಕೆ ಹೆಚ್ಚಾಯಿತು. ಚತುರೋಪಾಯ ನಿಪುಣರಾದ ಇಂಗ್ಲಿಷ್ ರಾಜಕಾರಣಿಗಳು ಆಗ ಪಠಾಣರನ್ನು ಲಂಚದಿಂದ ಸ್ವಾಧೀನಮಾಡಿಕೊಳ್ಳಲು ಹವಣಿಸಿದರು. ಪಠಾಣರ ಜಿರಗಾಗಳಿಗೆ (ಸರದಾರರಿಗೆ) ಹೀಗೆ ಇಂಗ್ಲಿಷರು ಹಂಚುತಿದ್ದ ಹಣ (ಖಿರಾಜ್) ಪ್ರತಿ ವರುಷವೂ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿತ್ತು. ಆದರೂ ಗಡಿನಾಡಿನ ಪಠಾಣರ (ಕಬಾ ಇಲಿಗಳ) ಇಲಾಖೆ ಬೆಂಕಿಯಾಡುತ್ತಲೇ ಇತ್ತು.

ಹೀಗೆ ಯುದ್ಧವೂ ದಾನವೂ ನಿರುಪಾಯವಾಗಲು ರಾಜತಂತ್ರ ನಿಪುಣರಾದ ಇಂಗ್ಲಿಷರು ಭಾರತದ ಮುಸಲ್ಮಾನರನ್ನು ಪಠಾಣರಲ್ಲಿಗೆ ರಾಜಿಸಂಧಾನಕ್ಕೆ ಅಟ್ಟಿದರು. ಆದರೆ ಪಠಾಣರ ಚಳುವಳಿ ಜಾತೀಯವಾಗಿರಲಿಲ್ಲ. ಭಾರತದ, ಆಂಗ್ಲೇಯ ಪ್ರೇರಿತ ಮುಸಲ್ಮಾನರು ಹೇಳಿದ "ಇಸ್ಲಾಂ ಅಪಾಯದಲ್ಲಿದೆ" ಎಂಬ ವಾದಕ್ಕೆ ಅವರು ಮರುಳಾಗಲಿಲ್ಲ. ಅಫ್ಘಾನಿಸ್ಥಾನ ನಿಮ್ಮನ್ನು ನುಂಗುತ್ತದೆ ಎಂಬ ವಾದಕ್ಕೂ ಮರುಳಾಗಲಿಲ್ಲ. ಅಫ್ಘಾನಿಸ್ಥಾನದವರ ಧರ್ಮವೂ ಪಠಾಣರ ಧರ್ಮವೂ ಎರಡೂ ಒಂದೇ ಆದರೂ ಅವರು ಧರ್ಮದ ಹೆಸರಿನಿಂದಲೂ ಅಫ್ಘಾನಿಸ್ಥಾನದೊಂದಿಗೆ ಒಂದಾಗಿಲ್ಲ. ಭಾರತದ ಮುಸಲ್ಮಾನರು ಅವರನ್ನು ಒಲಿಸಿಕೊಳ್ಳಲು ಹೋದಾಗಲೆಲ್ಲ ಅವರು "ಭಾರತದ ಮುಸಲ್ಮಾನರಿಗಾಗಿಯೂ ನಮ್ಮ ಸ್ವಾತಂತ್ರ್ಯವನ್ನು ಬಿಡೆವು. ಅಫ್ಘಾನಿಸ್ಥಾನಕ್ಕಾಗಿಯೂ ಬಿಡೆವು. ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು. ನಾವು ಅದನ್ನು ಹೊಂದಿಯೇ ಹೊಂದುತ್ತೇವೆ" ಎಂದು ಘೋಷಿಸಿದರು.

ಆಂಗ್ಲೇಯರ ಮದ್ದು ಗುಂಡುಗಳಿಗೆ ಬೆದರದ ಪಠಾಣರು ಅಹಿಂಸಾಮೂರ್ತಿ ಮಹಾತ್ಮಾಗಾಂಧಿಯವರ ಚಳುವಳಿಯಿಂದ ಆಕರ್ಷಿತರಾದರು. ಅಹಿಂಸೆಯ ಶಕ್ತಿಗೆ ಅದೊಂದು ಪವಾಡವೇ ಆಯಿತು. ಗಡಿನಾಡಿನ ಮುಖಂಡರಾದ ಖಾನ್ ಅಬ್ದುಲ್‌ಗಫಾರ್ ಖಾನ್ ಮತ್ತು ಅವರ ತಮ್ಮ ಡಾಕ್ಟರ್ ಖಾನ್ ಸಾಹೇಬರು ಮಹಾತ್ಮರ ನೆಚ್ಚಿನ ಅನುಯಾಯಿಗಳಾದರು. ಹಿಂಸಾಮಾರ್ಗಿಗಳಾದ ಪಠಾಣರೆಲ್ಲ ಖುದೈ ಖಿದ್ಮತ್‌ಗಾರ್ (ದೇವರ ಅನುಯಾಯಿ ಸೇವಕ)ರಾದ ಕೆಂಪು ಅಂಗಿಯವರಾದರು. ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಅವರು ಅತ್ಯಂತ ಹಿರಿದಾದ ಪಾತ್ರವನ್ನು ವಹಿಸಿ ದೇಶ ಸೇವಕರು

(2)

**ಕನ್ನಡ ಸಾಹಿತ್ಯಕ್ಕೆ**

# ಕಾಸರಗೋಡಿನ ಕಾಣಿಕೆ

**ಕಯ್ಯಾರ ಕಿಞ್ಞಣ್ಣರೈ**

ಪ್ರಾಂತ ಪುನಾರಚನಾಯೋಗದ ವರದಿಯಂತೆ, ಕಾಸರಗೋಡು ತಾಲೂಕು ಕೇರಳಕ್ಕೆ ಸೇರಬೇಕಾಗುತ್ತದೆಂಬುದನ್ನು ನೆನಸಿದಾಗ, ಅದರಿಂದಾಗಿ ಕನ್ನಡ ನಾಡು, ತೆಂಗು ಕಂಗು ಬತ್ತ ಬಾಳೆ ಮುಂತಾದ ಫಲಸಂಪತ್ತನ್ನು ಮಾತ್ರ ಕಳೆದುಕೊಳ್ಳುವುದಲ್ಲದೆ, ಅಂತಹ ಅಪಾರವಾದ ಸಾಂಪತ್ತಿಕ ಹಾನಿಯ ಜತೆಗೆ ಎಂತಹ ಸಾಹಿತ್ಯಿಕ ಹಾಗೂ ಬೌದ್ಧಿಕ ಸಂಪತ್ತನ್ನೂ ಕಳೆದುಕೊಳ್ಳ ಬೇಕಾಗಿದೆಯೆಂದೂ, ಆ ಮೂಲಕ ಆ ರೀತಿಯ ಪೂರ್ತಿಗೊಳಿಸಿದ ಮಹಾನಷ್ಟಕ್ಕೆ ಗುರಿಯಾಗಿ ಕನ್ನಡ ನಾಡು ಎಷ್ಟೊಂದು ದರಿದ್ರವಾಗುವುದೆಂಬುದನ್ನೂ ಎಣಿಸಿದಾಗ, ಯಾವ ಕನ್ನಡಿಗನಿಗೆ, ಯಾವ ಕನ್ನಡದ ಅಭಿಮಾನಿಗೆ ತಾನೇ ಕಳವಳವುಂಟಾಗಲಾರದು?

ಕಾಸರಗೋಡು ತಾಲೂಕು ಕನ್ನಡ ಸಾಹಿತ್ಯ ಸಂಸ್ಕೃತಿ ಕಲೆಗಳ ದೃಷ್ಟಿಯಲ್ಲಿ ಕನ್ನಡನಾಡಿಗೆ ಅಪೂರ್ವಕಾಣಿಕೆಗಳನ್ನು ಸಲ್ಲಿಸಿದೆ; ಇಂದಿಗೂ ಸಲ್ಲಿಸುತ್ತಿದೆ. ಅವುಗಳಲ್ಲಿ, ಪ್ರಾಮುಖ್ಯವಾಗಿ ಎತ್ತಿ ಹೇಳಬಹುದಾದುದು ಯಕ್ಷಗಾನ ಸಾಹಿತ್ಯ ಸಂಪತ್ತು. ಯಕ್ಷಗಾನ ಸಾಹಿತ್ಯದ ಜತೆಯಲ್ಲಿ ಅದರ ಅಸಾಧಾರಣ ನಾಟ್ಯವಿದ್ಯೆಯೂ, ಆ ಸಾಹಿತ್ಯ ನಾಟ್ಯ ವಿದ್ಯೆಗಳಿಗೆ ಸಹಾಯಕವಾಗಿ ಬೆಳೆದು ಬಂದ ಹಾಡುಗಾರಿಕೆ ಚೆಂಡೆಮದ್ದಳೆ ಮುಂತಾದ ಹಿಮ್ಮೇಳಗಳ ಕುಶಲಕಲಾ ವೈಶಿಷ್ಟ್ಯವೂ ಅತ್ಯಂತ ಗಣನೀಯವಾದ ವಿಷಯವಾಗಿರುವುದು. ಕನ್ನಡ ನಾಡಿನಾದ್ಯಂತ ಜನಪ್ರಿಯವಾದ ಈ ಜಾನಪದ ಕಲೆ, ಯಕ್ಷಗಾನದ ಮೂಲಸ್ಥಾನವೇ ಕಾಸರಗೋಡು ತಾಲೂಕೆಂಬುದನ್ನು ನಾವೀಸಂದರ್ಭದಲ್ಲಿ ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳತಕ್ಕುದು.

ಕಾಸರಗೋಡು ಪೇಟೆಯಿಂದ ಏಳೆಂಟು ಮೈಲು ಬಡಗುದಿಕ್ಕಿನಲ್ಲಿರುವ ಕುಂಬಳೆಯೆಂದು ಈಗ ಕರೆಯಲ್ಪಡುವ "ಕಣಿಪುರ" ಎಂಬಲ್ಲಿ (ಇಂದಿಗೂ ತುಳುಭಾಷೆಯಲ್ಲಿ ಆ ಊರನ್ನು ಕಣ್ಪುರ ಎಂದೇ ಕರೆಯುತ್ತಾರೆ.) ಯಕ್ಷಗಾನದ ಆದ್ಯ ಪ್ರವರ್ತಕನೂ ಮಹಾಕವಿಯೂ ಆದ ಪಾರ್ತಿಸುಬ್ಬನು ಜನಿಸಿದನು. ಯಕ್ಷಗಾನ ಸಾಹಿತ್ಯದ ಈ ಮಹಾಕವಿಯ ಕುರಿತು ದಿ| ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಒಂದು ವಿಮರ್ಶಾತ್ಮಕವಾದ ಬಲು ಉದ್ಗ್ರಂಥವೊಂದನ್ನು ಬರೆದು ಅಖಿಲ ಕನ್ನಡ ನಾಡಿಗೆ ಆ ಕವಿಯ ಹಿರಿಯ ಯೋಗ್ಯತೆಯನ್ನು ವಿಶದಪಡಿಸಿದ್ದಾರೆ. ಯಕ್ಷಗಾನ ಪ್ರಪಂಚದಲ್ಲಿ ಅತ್ಯಂತ ಪ್ರಖ್ಯಾತವಾದ ಅನೇಕ ಕೃತಿಗಳನ್ನು ಪಾರ್ತಿ ಸುಬ್ಬನು ಇಲ್ಲಿಯೇ ರಚಿಸಿದನು; ಆತನು ಕೇವಲ ಕವಿ ಮಾತ್ರನಾಗಿರದೆ, ಯಕ್ಷಗಾನ ಕಲೆಯ ನಾಟ್ಯ, ವೇಷಗಾರಿಕೆ, ಹಾಡುಗಾರಿಕೆ, ಹಿಮ್ಮೇಳ ಇವೇ ಮುಂತಾದ ಅದರ ನಾನಾ ಅಂಗಗಳ ಕುರಿತು ಹಲವು ಸಫಲ ಪ್ರಯೋಗಗಳನ್ನು ಮಾಡಿ ಯಕ್ಷಗಾನವು ಜನಪ್ರಿಯಕಲೆಯಾಗುವಂತೆ ದುಡಿದ ಸಾಹಿತ್ಯದ ಸೀಮಾ ಪುರುಷನಾಗಿರುವನು. ಬಯಲಾಟ, ತಾಳಮದ್ದಳೆಗಳ ರೂಪದಲ್ಲಿ ಎಲ್ಲೆಡೆಗಳಲ್ಲೂ ಪಸರಿಸಿರುವ ಈ ಕಲೆಯನ್ನು ರೂಪಿಸಿ ಬೆಳೆಸಿದವನು ಪಾರ್ತಿ ಸುಬ್ಬನು. ಆತನ ಜನ್ಮಸ್ಥಾನ ಹಾಗೂ ಕಾರ್ಯಕ್ಷೇತ್ರವೇ ಕಾಸರಗೋಡು ತಾಲೂಕಾಗಿದೆಯೆಂಬುದು ಒಂದು ಚಾರಿತ್ರಿಕ ಮಹತ್ವವುಳ್ಳ ಸಂಗತಿಯಾಗಿದೆ. ಅದರಿಂದ ಕಾಸರಗೋಡು ತಾಲೂಕು ಕನ್ನಡಿಗರಿಗೆ ಚಿರಸ್ಮರಣೀಯವಾದೊಂದು ಪ್ರದೇಶವಾಗಿದೆ.

ಪಾರ್ತಿಸುಬ್ಬನ ಹುಟ್ಟೂರಾದ ಕುಂಬಳೆ ಸೀಮೆ ಅಂದಿನಿಂದ ಇಂದಿನ ವರೆಗೆ ಯಕ್ಷಗಾನ ಕಲೆಯಲ್ಲಿ ನಿಸ್ಸೀಮವಾಗಿರುವುದು. ಅನೇಕ ಯಕ್ಷಗಾನ ಕಲಾವಿದರು ಇಲ್ಲಿ ಆಗಿ ಹೋದರು. ಈಗಲೂ ಇಲ್ಲಿನ ಹೆಸರಾಂತ ಅನೇಕರು ಆಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಕುಂಬಳೆಯ ಅರಸರು ಈ ಕಲೆಯ ಪೋಷಕರಾಗಿದ್ದರೆಂದೂ ಕನ್ನಡದ ಅಭಿಮಾನಿಗಳಿದ್ದರೆಂದೂ ನಾವು ಈ ಸಂದರ್ಭದಲ್ಲಿ ನೆನವರಿಕೆ ಗೈಯುವುದು ಸಮಂಜಸವಾಗುತ್ತದೆ. ಕಾಸರಗೋಡು ತಾಲೂಕಿಗೆ ಸೇರಿದ ಕೂಡ್ಲು, ಇಚ್ಲಂಪಾಡಿ ಮನೆತನಗಳ ಉದಾರೀ ಶ್ರೀಮಂತರು ಯಕ್ಷಗಾನ ಕಲೆಯ ಅಭಿವೃದ್ಧಿಗಾಗಿ ಬಹಳ ದುಡಿದಿದ್ದಾರೆ. ಇಂದಿಗೂ, ಆ ಮನೆತನಗಳವರು ಮಾತ್ರವಲ್ಲ, ಹಲವಾರು ಜನರು ಆ ಹಾದಿಯಲ್ಲಿ ದುಡಿಯುತ್ತಿದ್ದಾರೆ. ನಾವೀಸಂದರ್ಭದಲ್ಲಿ ದಿ| ಕೂಡ್ಲು ಸುಬ್ರಾಯ ಶ್ಯಾನುಭಾಗರು ಯಕ್ಷಗಾನ ಕಲೆಗೆ ಸಲ್ಲಿಸಿದ ಅನುಪಮವಾದ ಸೇವೆಯನ್ನು ಮರೆಯಬಾರದು. ಸ್ವತಃ ಅವರು ಶ್ರೇಷ್ಠ ಕಲಾ ಕೋವಿದರಾಗಿದ್ದು, ಉದಾರಿಗಳಾದ ಶ್ರೀಮಂತರಿದ್ದು, ತನ್ನ ಮನೆಯನ್ನೇ ಗುರುಮಠವಾಗಿ

ಮಾಡಿಕೊಂಡು, ಅನೇಕ ಶಿಷ್ಯರಿಗೆ ಯಕ್ಷಗಾನ ಕಲೆಯನ್ನು, ಅರ್ಥಗಾರಿಕೆ, ಹಾಡುವಿಕೆ, ಮೃದಂಗ, ಚೆಂಡೆವಾದನ, ನಾಟ್ಯ, ವೇಷಭೂಷಣರಚನೆ ಮುಂತಾದ ಆ ವಿದ್ಯೆಯ ಸರ್ವಾಂಗಗಳನ್ನು ಉಚಿತ ಅನ್ನ ಬಟ್ಟೆಗಳನ್ನಿತ್ತು ಸಹಕರಿಸಿ ವಿದ್ಯಾದಾನಮಾಡಿದ ಅವರ ಆ ಕಲಾಸೇವೆ, ಕನ್ನಡದ ಸೇವೆ ಈ ನಾಡಿನಲ್ಲಿ ಎಂದೆಂದಿಗೂ ಮರೆಯತಕ್ಕದ್ದಲ್ಲ. ಅವರಂತಹ ಕನ್ನಡದ ಅಭಿಮಾನಿಗಳು ಈ ತಾಲೂಕಿನಲ್ಲಿ ಹುಟ್ಟಿಬೆಳೆದ ರೆಂಬುದರಿಂದಲೇ ಈ ಭಾಗದಲ್ಲಿ ಮುಂದೆ ಕನ್ನಡದ ಸರಸ್ವತಿಯ ಮಹಾಪೂಜೆ ಅನೇಕ ಮಹನೀಯರಿಂದ ಬಹುಮುಖವಾಗಿ ಉತ್ಸಾಹಪೂರ್ಣವಾಗಿ ನಡೆಯಿತೆಂದು ನಾವು ಅರ್ಥ ಮಾಡಿಕೊಳ್ಳಬಹುದು.

ದಿವಂಗತ ಶ್ಯಾನುಭಾಗರು ಸಲ್ಲಿಸಿದ ಅಂತಹ ಅನುಪಮ ಸೇವೆಯ ಫಲವಾಗಿಯೇ ಇಂದಿಗೂ ಕೂಡ್ಲು ಮೇಳವೆಂಬ ಸಂಸ್ಥೆಯು ಯಕ್ಷಗಾನ ಕಲಾ ಪ್ರಪಂಚದಲ್ಲಿ ಮನ್ನಣೆಯ ಪಟ್ಟವನ್ನು ಪಡೆದು ಮೆರೆಯುತ್ತಿದೆ. ಈ ಮೇಳದಲ್ಲಿ ವೇಷಧಾರಿಗಳಾಗಿ, ಭಾಗವತರಾಗಿ, ಹಿಮ್ಮೇಳದವರಾಗಿ ಅನೇಕ ಕನ್ನಡ ಕಲೋಪಾಸಕರು ಕೀರ್ತಿಪಡೆದಿದ್ದಾರೆ. ಪ್ರಖ್ಯಾತರಾದ ಅನೇಕಯಕ್ಷಗಾನ ಭಾಗವತರು ಈ ತಾಲೂಕಿಗೆ ಸೇರಿದವರು. ಅವರಲ್ಲಿ ಖ್ಯಾತಿವೆತ್ತ ದಿ| ನಾರಂಪಾಡಿ ನಾರಾಯಣ ಭಾಗವತರು ದಿ| ಪುತ್ತೂರು ನಾರಾಯಣ ಭಾಗವತರು ದಿ| ಪೆರ್ವೊಡಿ ಸಂಕಯ್ಯ ಭಾಗವತರು ಮೊದಲಾದವರು ಸುಪ್ರಸಿದ್ಧರು. ಇಂದಿಗೂ ಶ್ರೀಯುತರಾದ ಬಲಿಪ ನಾರಾಯಣ ಭಾಗವತರು, ಮೈಂದಪ್ಪ ರೈಗಳು, ಮಹಾಬಲ ನೋಂಡರು, ಜಗನ್ನಾಥ ಶೆಟ್ಟರೇ ಮುಂತಾದ ಭಾಗವತರು ಅತ್ಯಂತ ಪ್ರಖ್ಯಾತರಿದ್ದು ಅವರೆಲ್ಲರೂ ಈ ತಾಲೂಕಿನವರೇ ಆಗಿರುವರು. ದಿ| ಕುಂಬ್ಳೆ ಕೊಗ್ಗ ಮದ್ಲೆಗಾರರು, ಶ್ರೀಯತರಾದ ಏರಿಕ್ಕಳ ಈಶ್ವರಪ್ಪಯ್ಯನವರು, ಶ್ರೀನಿವಾಸರಾಯರು, ಕುದ್ರೆಕ್ಕೋಡು ರಾಮ ಭಟ್ಟರು ಮುಂತಾದ ಮೃದಂಗ ಚೆಂಡೆವಾದನ ನಿಪುಣರು ಈ ತಾಲೂಕಿನವರೇ ಆಗಿದ್ದಾರೆ. ವೇಷಗಾರಿಕೆಯಲ್ಲಿ ಖ್ಯಾತನಾಮರಾದ ದಿ| ಮಾಣಂಗಾಯಿ ವೆಂಕಟೇಶ್ವರ ಭಟ್ರು ದಿ| ಬಣ್ಣದ ಮಾಲಿಂಗ, ದಿ| ಮುಳಿಯಾರು ಕೇಶವ ಭಟ್ಟರು ದಿ| ಮದೂರು ವೆಂಕಪ್ಪಯ್ಯರು, ದಿ| ಕೂಡ್ಲು ನಾಣಾರು, ದಿ| ಗುಂಡರು ಮೊದಲಾದ ಕಲಾವಿದರು ಈ ಭಾಗದವರು. ಇಂದಿಗೂ ಶ್ರೀಗಳಾದ ಸುಬ್ಬಯ್ಯ ಶೆಟ್ಟರು, ವಿಠಲ ಶಾಸ್ತ್ರಿಗಳು, ಕೃಷ್ಣ ಭಟ್ಟರೇ ಪ್ರಮುಖರಾದ ಕಲಾವಿದರು ಇಲ್ಲಿ ಇದ್ದಾರೆ. ಯಕ್ಷಗಾನ ತಾಳಮದ್ದಳೆ ಮುಂತಾದ ಕನ್ನಡ ಕಲಾಕ್ಷೇತ್ರದಲ್ಲಿ ಅತ್ಯಂತ ಆಸಕ್ತಿಯಿಂದ ದುಡಿಯುತ್ತಿರುವ ಎಡ್ವೊಕೇಟ್ ಶ್ರೀ ಬಾಲಕೃಷ್ಣರಾಯರು ಈ ತಾಲೂಕಿಗೆ ಸೇರಿದ ಕುಬಣೂರಿನವರು. ಪಾರ್ತಿ ಸುಬ್ಬಕವಿಯನಂತರವೂ ಈ ಸೀಮೆಯವರಾದ ದಿ| ಮೈರ್ಪಾಡಿ ವೆಂಕಟರಮಣಯ್ಯರು ದಿ| ಕುಂಬಳೆ ನರಸಿಂಹ ಲಕ್ಷ್ಮಣ ನಾಯಕರು, ದಿ| ಜತ್ತಿ ಈಶ್ವರ ಭಟ್ಟರು ಮೊದಲಾದವರೂ, ಆ ಮೇಲೆ ಆಧುನಿಕರಾದ ಶ್ರೀಯುತ ಡಿ. ವಿಷ್ಣುಮೂರ್ತಿ ಹೊಳ್ಳರು, ಪೆರ್ಡಾಲ ಕೃಷ್ಣಯ್ಯರು, ಕೀರಿಕ್ಕಾಡು ವಿಷ್ಣು ಭಟ್ಟರು, ಶೇಣಿ ಗೋಪಾಲಕೃಷ್ಣ ಭಟ್ಟರು, ಸಿ. ಎಚ್. ಶಂಕರನಾರಾಯಣ ಭಟ್ಟರೇ ಮೊದಲಾದವರೂ ಈ ತಾಲೂಕಿನಲ್ಲಿ ಯಕ್ಷಗಾನ ಕೃತಿಗಳನ್ನು ರಚಿಸಿದ್ದಲ್ಲದೆ ಆ ಕಲೆಯ ಏಳಿಗೆಗಾಗಿ ನಿರಂತರ ದುಡಿಯುತ್ತಿರುವರು. ಅಂತೂ, ಯಕ್ಷಗಾನದಂತಹ ಜನಪ್ರಿಯ ಕನ್ನಡ ಕಲೆಯ ಹುಟ್ಟು, ಬೆಳವಣಿಗೆ, ಪೋಷಣೆ ಏಳಿಗೆಗಳ ದೃಷ್ಟಿಯಲ್ಲಿ ಈ ಕಾಸರಗೋಡಿನ ಕಲಾವಿದರ ಸೇವೆ ಸರ್ವಥಾ ಮರೆಯಲು ಸಾಧ್ಯವಿಲ್ಲ. ಯಕ್ಷಗಾನ ಕಲೆಯ ಒಂದೇ ಒಂದು ವಿಷಯಕ್ಕೇ ಆದರೂ ಈ ತಾಲೂಕು ಕನ್ನಡದಲ್ಲಿಯೇ ಉಳಿಯ ಬೇಕಾದುದು—ಉಳಿಸ ಬೇಕಾದುದು ಕನ್ನಡ ನಾಡಿಗರ ನಮ್ಮೆಲ್ಲರ ಕರ್ತವ್ಯವಾಗಿರುವುದು.

ಇದುಮಾತ್ರವಲ್ಲದೆ ಕನ್ನಡ ನಾಡಿನ ನಾನಾವಿಧದ ಇತರ ರೂಪದ ಸಾಹಿತ್ಯ ಸಂಸ್ಕೃತಿ ಕಲೆಗಳ ಸಮೃದ್ಧವಾದ, ವಿಪುಲವಾದ ಕೃಷಿ ಈ ತಾಲೂಕಿನ ಅನೇಕ ಮಹನೀಯರಿಂದ ಆಗಿದೆ; ಆಗುತ್ತಾ ಇದೆ. ಈ ವಿಭಾಗದಲ್ಲಿ ಮೊತ್ತಮೊದಲಿಗೆ ಹೆಸರಿಸಬಹುದಾದ ಮಹಾವ್ಯಕ್ತಿ, ಕನ್ನಡ ಇತಿಹಾಸ ಸಂಶೋಧನೆ ಹಾಗೂ ಕನ್ನಡ ಕಾವ್ಯರಚನೆ ಇವೆರಡರಲ್ಲಿಯೂ 'ಸವ್ಯಸಾಚಿ'ಯೆನಿಸಿ ಕೀರ್ತಿವೆತ್ತ ರಾಷ್ಟ್ರಕವಿ ಶ್ರೀ ಗೋವಿಂದ ಪೈಗಳು. ಶ್ರೀ ಗೋವಿಂದ ಪೈಗಳು ಕಾಸರಗೋಡು ತಾಲೂಕಿನ ಮಂಜೇಶ್ವರದಲ್ಲಿರುವರು. ಯಕ್ಷಗಾನದ ಮೂಲ ಸ್ಥಾನ ಹಾಗೂ ಪಾರ್ತಿ ಸುಬ್ಬನ ಜನ್ಮಸ್ಥಾನ ಕಾಸರಗೋಡುತಾಲೂಕೆಂಬ ಅಭಿಮಾನದಂತೆ, ಆ ಅಭಿಮಾನದ ಸಲುವಾಗಿಯಾದರೂ ಕಾಸರಗೋಡು ತಾಲೂಕು ಕನ್ನಡ ನಾಡಿನಲ್ಲಿಯೇ ಉಳಿಯಬೇಕಾದಂತೆ, ಶ್ರೀ ಗೋವಿಂದ ಪೈಗಳ ನಾಡುಸಹ ಇದೆಯೆಂಬುದೂ ಕನ್ನಡಿಗರಿಗೆಲ್ಲಾ ಅತ್ಯಂತ ಹೆಮ್ಮೆಯು. ಆದರೆ ಇಂದಿಗೆ ಉದ್ವೇಗವನ್ನುಂಟುಮಾಡುವ ವಿಷಯವಾಗಿದೆ. ಈ ಭಾರ್ಗವ ತಪೋಭೂಮಿಯಲ್ಲಿ ಕಳೆದ ಅರ್ಧ ಶತಮಾನಕ್ಕಿಂತಲೂ ಹೆಚ್ಚಿನಕಾಲ ಯಾರು ಕನ್ನಡ ಸಾಹಿತ್ಯ ತಪಸ್ಸುಗೈದರೋ ಯಾರು ತನ್ನ ತಪಸ್ಸಿನ ಫಲವನ್ನು ಸಂಶೋಧನೆ ಕಾವ್ಯರಚನೆಗಳ ಮೂಲಕ ಅಖಿಲ ಕನ್ನಡ ನಾಡಿಗೆ ಧಾರಾ ರೂಪವಾಗಿ ಕಾಣಿಕೆಯಿತ್ತರೋ, ಯಾರ ದರ್ಶನದ ಸಲುವಾಗಿ ಅಖಿಲ ಕನ್ನಡ ನಾಡಿಂದಲೂ ಸಾಹಿತ್ಯ ಪ್ರೇಮಿಗಳು ಯಾತ್ರಾಸ್ಥಳವೆಂಬಂತೆ ಮಂಜೇಶ್ವರಕ್ಕೆ ಬರುತ್ತಿದ್ದಾರೋ, ಅಂತಹ ಮಹಾವ್ಯಕ್ತಿ ಗೋವಿಂದ ಪೈಗಳಿರುವ ಪ್ರದೇಶವೇ ತಾಲೂಕೇ

ಇಂದು ತ್ರಿಮೂರ್ತಿಗಳ ವರದಿಯಂತೆ ಕೇರಳಕ್ಕೆ ಹೋಗಬೇಕಾಗಿದೆ! ಯಾರು ಕನ್ನಡ ಶಾಸನಗಳನ್ನು ಹುಡುಕಿ ಹುಡುಕಿ, ಕನ್ನಡ ಕವಿಗಳ ಜಾತಕಗಳನ್ನು ಗುಣಿಸಿ ಗುಣಿಸಿ, ಪ್ರಾಚೀನಾರ್ವಾಚೀನ ಪಾಶ್ಚಾತ್ಯ ಪೌರ್ವಾತ್ಯ ಸಾಹಿತ್ಯ ರಾಶಿಯನ್ನು ಜೀರ್ಣಿಸಿ ಜೀರ್ಣಿಸಿ, ಕನ್ನಡದಲ್ಲಿ ಅಸದೃಶ ಕಾವ್ಯನಿರ್ಝರವನ್ನು ಹರಿಯಿಸಿದರೋ, ಯಾರ ಕವಿತಾ ಪ್ರತಿಭೆಗೆ ಮೆಚ್ಚಿ ಸರಕಾರವು ರಾಷ್ಟ್ರಕವಿ ಬಿರುದನ್ನಿತ್ತು ಗೌರವಿಸಿತೋ ಆ ಕನ್ನಡದ ಭೀಷ್ಮಾಚಾರ್ಯರಾದ ಶ್ರೀ ಗೋವಿಂದ ಪೈಗಳಿರುವ ಮಂಜೇಶ್ವರವೂ ಕೇರಳಕ್ಕೆ ಸೇರ್ಪಡೆಯಾಗುವುದೆಂದರೆ ಅದೆಂತಹ ವಿಧಿಯ ವಿಪರ್ಯಾಸವು! ಅದೆಂತಹ ಕನ್ನಡದ ದೌರ್ಭಾಗ್ಯವು! ಈ ನೋವನ್ನು ಕನ್ನಡ ತಾಯಿ ಶಾಂತಳಾಗಿ ಸಹಿಸಿಯಾಳೆ?

ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರಾರಂಭಕಾಲದಲ್ಲಿ, ಉಜ್ವಲ ದೇಶಾಭಿಮಾನದಿಂದ ಪ್ರೇರಿತರಾಗಿ, ತನ್ನ ಸಹಜ ಕೋಕಿಲ ಕಂಠದಿಂದ ಅನೇಕ ಸ್ಫೂರ್ತಿಯುತ ರಾಷ್ಟ್ರೀಯ ಕವನಗಳನ್ನು ರಚಿಸಿ ಕರ್ನಾಟಕದಾದ್ಯಂತ ಖ್ಯಾತನಾಮರಾದ ದಿ| ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಈ ತಾಲೂಕಿಗೆ ಸೇರಿದವರು. ಅವರು ಮಾತ್ರವಲ್ಲದೆ ಅವರ ಕುಟುಂಬದ ಅನೇಕ ವಿದ್ವಾಂಸರು ಶ್ರೀ ದಾಮೋದರ ಪುಣಿಂಚತ್ತಾಯರು, ಶ್ರೀ ಗೋಪಾಲಕೃಷ್ಣ ಪುಣಿಂಚತ್ತಾಯರೇ ಮೊದಲಾದವರು ಯಕ್ಷಗಾನ ಸಾಹಿತ್ಯ ಕ್ಷೇತ್ರಗಳಲ್ಲಿ ದುಡಿದು ಕನ್ನಡ ಸೇವೆಯನ್ನು ಇಂದಿಗೂ ಗೈಯುತ್ತಿರುವರು. ಇಂತಹ ಕನ್ನಡ ವಿದ್ವಾಂಸರ ಕುಟುಂಬಗಳೆಲ್ಲಾ ಕೇರಳಾಂತರ್ಗತವಾಗಿರಬೇಕಾಗುತ್ತದೆಯೆಂಬುದುದನ್ನು ನೆನಸಿದರೇ ಮೈ ನಡುಗುತ್ತದೆ. ಮಹಾಕವಿರನ್ನನ ಸಹಸ್ರ ಸಾಂವತ್ಸರಿಕೋತ್ಸವದಂದು ಆತನ ಕೃತಿರತ್ನವಾದ ಗದಾಯುದ್ಧವನ್ನು ಸಂಶೋಧಿಸಿ ಪ್ರಕಟಿಸಿದ ಕನ್ನಡ ವಿದ್ವಾಂಸರೂ, ಕವಿಗಳೂ ಆದ ದಿ| ಕಾವೇರಿಕಾನ ಕೃಷ್ಣಭಟ್ಟರು ಈ ತಾಲೂಕಿನವರು. ಇಂದು ವಿದೇಶದಲ್ಲಿ ನಮ್ಮ ನಾಡಿನ ಕೀರ್ತಿಧ್ವಜವನ್ನೆತ್ತಿ ಹಿಡಿದಿರುವ ಮಹಾವಿದ್ವಾಂಸರೂ, "ಆಶ್ಚರ್ಯ ಚೂಡಾಮಣಿ" ಮುಂತಾದ ಪ್ರೌಢಕಾವ್ಯಗಳ ಲೇಖಕರೂ ಆದ ಶ್ರೀ ಮೇಣ ರಾಮಕೃಷ್ಣ ಭಟ್ಟರು ಇಲ್ಲಿನವರೇ ಆಗಿದ್ದಾರೆ. "ಕುಂದಮಾಲೆ" ಮುಂತಾದ ಉದ್ಗ್ರಂಥಗಳನ್ನು ರಚಿಸಿ ಸರಕಾರದ ಪಾರಿತೋಷಕಗಳಿಗೆ ಪಾತ್ರರಾದ ಶ್ರೀ. ಎಂ. ಶಂಕರನಾರಾಯಣ ಭಟ್ಟರೂ ಈ ತಾಲೂಕಿಗೆ ಸೇರಿದವರೆಂಬುದನ್ನು ನಾವು ಮರೆಯಲಾಗದು. ಕಾಳಿದಾಸನ ಮೇಘದೂತ, ಶ್ಯಾಮಲಾದಂಡಕಗಳನ್ನು ಕನ್ನಡಕ್ಕನುವಾದ ಮಾಡಿದ ದಿ| ರಾಮಶರ್ಮರು ಇಲ್ಲಿನ ಪಟ್ಟದ ಮೊಗರಿನವರು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸದ ಕುರಿತು ಸಂಶೋಧನಾತ್ಮಕ ಪ್ರೌಢ ಗ್ರಂಥವೊಂದನ್ನು ಬರೆದವರೂ, ಅನೇಕ ಶಾಲಾ ಪುಸ್ತಕಗಳನ್ನು ರಚಿಸಿದವರೂ ಜನಪ್ರಿಯ ಲೇಖಕರೂ ಆಗಿದ್ದ ದಿ| ಗಣಪತಿ ರಾವ್ ಐಗಳರವರು ಮಂಜೇಶ್ವರದವರು. ಇಂದು ಮಂಜೇಶ್ವರದ ಪ್ರತಿನಿಧಿಯಾಗಿ ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀತೊಟ್ಟೆತ್ತೋಡಿ ನಾರಾಯಣ ಭಟ್ಟರು ಕನ್ನಡದ ಕವಿ ಕತೆಗಾರ ವಿಮರ್ಶಕರೆಂದು ಕೀರ್ತಿಪಡೆದವರು.

ಕಾವ್ಯ ಪ್ರಪಂಚದಂತೆ ಕಥಾಲೋಕದಲ್ಲಿಯೂ ಸಿದ್ಧಹಸ್ತರೂ ಪ್ರಸಿದ್ಧರೂ ಆದ ಹಲವರು ಈ ತಾಲೂಕಿನಲ್ಲಿ ಜನಿಸಿದ್ದಾರೆ. ಎಳವೆಯಲ್ಲಿಯೇ ಕನ್ನಡನಾಡಿನ ಶ್ರೇಷ್ಠ ಕತೆಗಾರರಲ್ಲೊಬ್ಬರೆನಿಸಿ, ಕೊನೆಯುಸಿರತನಕವೂ ಕನ್ನಡ ಕನ್ನಡವೆಂದೇ ಜಪಿಸಿ ಅಕಾಲ ಮೃತ್ಯುವಿಗೆ ತುತ್ತಾದ ಅಭಿನವ ಮುದ್ದಣ ದಿ| ಕಾರ್ಯಹಳ್ಳ ರಾಮಕೃಷ್ಣ ಶೆಟ್ಟರನ್ನು ನೀವು ಈ ಸಂದರ್ಭದಲ್ಲಿ ನೆನಪುಮಾಡಬೇಕು; ಅವರು ಕಾಸರಗೋಡು ಪೇಟೆಯಲ್ಲಿಯೇ ಹುಟ್ಟಿ ಬೆಳೆದವರು. ಅಲ್ಲಿಯೇ ಅನೇಕ ರೀತಿಯಿಂದ ಕನ್ನಡ ಸಾಹಿತ್ಯ ಸೇವೆ ಮಾಡಿದವರು. ವಿವೇಕ ಸಾಹಿತ್ಯ ಮಾಲೆಯ ಮೂಲಕ ಕನ್ನಡಕ್ಕೆ ಕತೆ ಕಾದಂಬರಿ ನಾಟಕಾದಿಗಳ ಕಾಣಿಕೆಯಿತ್ತ ಮೊಳೆಯಾರ ಬಂಧುಗಳು ಈ ತಾಲೂಕಿನ ಬೇಳಗ್ರಾಮದವರು. ಕನ್ನಡದ ಕತೆಕಾದಂಬರಿಕಾರರಾದ ಶ್ರೀ ಶ್ರೀಕಂಠರು ಕಾಸರಗೋಡು ತಾಲೂಕಿನ ಪೆರಡಾಲ ಗ್ರಾಮದವರು. ಕನ್ನಡದಲ್ಲಿ ಚಾರಿತ್ರಿಕ ಹಿನ್ನೆಲೆಯ ಸುಂದರವಾದ ಕೋಟೆಯ ಕತೆಗಳನ್ನು ಬರೆದ ಶ್ರೀ ಬೇಕಲ ರಾಮನಾಯಕರು ಕಾಸರಗೋಡಿನಿಂದ ತೆಂಕಣ ಭಾಗದವರು; ಚಂದ್ರಗಿರಿ ಹೊಳೆಯ ದಕ್ಷಿಣದವರು; ಅಂತೆಯೇ ಚಂದ್ರಗಿರಿ ಹೊಳೆಯ ಇನ್ನಷ್ಟು ದಕ್ಷಿಣದವರಾದ ಇಂದಿನ ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಎನ್. ಜಿ. ಕಾಮತರೂ ಕನ್ನಡದ ಶ್ರೇಷ್ಠ ಕತೆಗಾರರಲ್ಲೊಬ್ಬರಾಗಿದ್ದಾರೆ. ಕಾಸರಗೋಡಿನ ಪ್ರಸಿದ್ಧವಕೀಲರೂ, ಇಂದಿನ ಏಕೀಕರಣ ಚಳವಳದ ಮುಂದಾಳುಗಳಲ್ಲೊಬ್ಬರೂ ಆದ ಶ್ರೀಕಳ್ಳಿಗೆ ಮಹಾಬಲ ಭಂಡಾರಿಗಳು ಕನ್ನಡದಕಾದಂಬರಿಕಾರರೂ ಲೇಖಕರೂ ವಾಗ್ಮಿಗಳೂ ಎಂಬುದನ್ನು ನಾವು ಮರೆಯಲಾಗದು. ಅಂತೆಯೇ ಕಾಸರಗೋಡಿನ ಇನ್ನೊಬ್ಬ ವಕೀಲರೂ ಏಕೀಕರಣ ಚಳವಳದ ಪುರಸ್ಕರ್ತರೂ ಆದ ಶ್ರೀ ಕೆ. ಎಸ್. ಸುಬ್ರಾಯ ಭಟ್ಟರು ಕನ್ನಡದ ಕವಿಗಳೂ ಲೇಖಕರೂ ಆಗಿರುವರು. ಇಂದು ಮಂಗಳೂರಲ್ಲಿ ಪ್ರಸಿದ್ಧ ವಕೀಲರಾಗಿರುವ, ಹಿಂದೆ ಕಾಸರಗೋಡಿನಲ್ಲಿ 1947ರಂದು ಜರಗಿದ ೩ನೇ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಗಳಲ್ಲೊಬ್ಬರಾಗಿ, ಸಮ್ಮೇಳನದ ಯಶಸ್ಸಿಗೆ ಬಹುಮುಖದಿಂದ ದುಡಿದ ಶ್ರೀ ಬಿ. ಎಸ್. ಕಕ್ಕಿಲ್ಲಾಯರು ಕನ್ನಡದ ಕವಿಗಳೂ ಲೇಖಕರೂ ವಾಗ್ಮಿಗಳೂ ಆಗಿದ್ದಾರೆ. ಇವರೆಲ್ಲರೂಕಾಸರಗೋಡು ತಾಲೂಕಿಗೇ ಸೇರಿದ ಮಹನೀಯರು. ಕಾಸರ

ಗೋಡಿನಲ್ಲಿ ಇಂದಿಗೂ ಶ್ರೀಯುತರಾದ ಕೆ. ಎಸ್. ಶರ್ಮಾ, ಶಿವರಾಮ ಶೆಟ್ಟಿ, ವೈ. ಮಹಾಲಿಂಗ ಭಟ್ಟ, ವಿಠಲ ಶೆಟ್ಟಿ, ಪಿ.ಕೆ. ನಾರಾಯಣ, ಎಸ್.ಕೃಷ್ಣ ಭಟ್ಟ ಮುಂತಾದ ಕನ್ನಡದ ಲೇಖಕರು ಸಾಹಿತ್ಯದ ವಿವಿಧಾಂಗಗಳಲ್ಲಿ, ಅನೇಕ ಕನ್ನಡ ಸಂಸ್ಥೆಗಳಲ್ಲಿ ಬಹು ವಿಧದ ಕನ್ನಡ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದಾರೆ. ಬಾಲ ಸಾಹಿತ್ಯ ನಿರ್ಮಾಣದಲ್ಲಿ ಪ್ರಸಿದ್ಧರಾದ ಶ್ರೀ ಎನ್. ಮಾರಪ್ಪ ಶೆಟ್ಟಿಯವರು ಇದೇ ತಾಲೂಕಿಗೆ ಸೇರಿದವರೆಂಬುದು ನಾವು ಮರೆಯತಕ್ಕುದಲ್ಲ. ಇಲ್ಲಿನ ಹಲವು ಮಂದಿ ಮಲೆಯಾಳಿ ಮಾತೃಭಾಷೆಯವರಾದ ಮಹನೀಯರೂ ಕನ್ನಡ ಲೇಖಕರಾಗಿ ಪ್ರಸಿದ್ಧರಾಗಿದ್ದಾರೆ. ಅವರಲ್ಲಿ ಶ್ರೀಯುತರಾದ ರಾಮನಂಬಿಯಾರ್, ನಾರಾಯಣ ನಂಬಿಯಾರ್, ಉಬೈದ್, ಇಬ್ರಾಹಿಮ್, ಮಹಮ್ಮದ್ ಕುಂಞ ಮುಂತಾದವರು ಗಣನೀಯರು. ಮಲೆಯಾಳ ಮಾತೃಭಾಷೆಯಾಗಿದ್ದ ದಿ| ಶೆರೂಲರು ಪ್ರಕಾಶಕರಾಗಿದ್ದು ಶ್ರೀ ಕೆ. ಹೈದರರು ಸಂಪಾದಕರಾಗಿ ಕಾಸರಗೋಡು ತಾಲೂಕಿನ ಬಾಡೂರಿನಲ್ಲಿ 'ಜ್ಯೋತಿ' ಎಂಬೊಂದು ಕನ್ನಡ ಮಾಸ ಪತ್ರಿಕೆ 1935ರ ಸಾಲಿಗೆ ಪ್ರಾರಂಭವಾಗಿದ್ದು, ಕೆಲಕಾಲದ ತನಕ ಶ್ರೇಷ್ಠ ವರ್ಗದ ಸಾಹಿತ್ಯ ಪತ್ರಿಕೆಯಾಗಿ ನಡೆದು ಕೀರ್ತಿ ಪಡೆದಿದೆ. ಕಾಸರಗೋಡು ಪೇಟೆಯಲ್ಲಿರುವ ಶ್ರೀನಿವಾಸ ಮುದ್ರಣಾಲಯದ ಒಡೆಯರಾದ ಶ್ರೀ ಶ್ರೀನಿವಾಸ ಶೆಣೈಯವರು ಸಂಪಾದಕರಾಗಿ 'ಪ್ರವಾಸಿ'ಯೆಂಬ ಇನ್ನೊಂದು ಶ್ರೇಷ್ಠ ಪತ್ರಿಕೆ ಪ್ರಕಾಶವಾಗುತಿದ್ದು ದಿ| ಎಂ. ಎನ್. ಕಾಮತರೇ ಮುಂತಾದವರ ಲೇಖನಗಳಿಂದ ಅದು ಜನಪ್ರಿಯವೆನಿಸಿತ್ತು. ಇಂದಿಗೂ ಇಲ್ಲಿನ ಪೆರಡಾಲದಲ್ಲಿ 'ನವಚೇತನ'ವೆಂಬ ಮಾಸಪತ್ರಿಕೆ ಪ್ರಕಟವಾಗುತ್ತಿದ್ದು ಕನ್ನಡದ ಕೀರ್ತಿಯ ಬಾವುಟವನ್ನು ಹಿಡಿದು ನಿಂತಿದೆ. ಬೇಳ, ಕಾಸರಗೋಡು ಮುಂತಾದ ಕೇಂದ್ರಗಳಲ್ಲಿ ಪ್ರೇಮ ಕೂಟ, ಸಾಹಿತ್ಯ ಸಮಿತಿ, ಮಿತ್ರ ವೃಂದ ಪ್ರಕಾಶನ, ಪಂಪ ಪ್ರಕಾಶನ ಮುಂತಾದ ಕನ್ನಡ ಪುಸ್ತಕ ಪ್ರಕಾಶನ ಮಂದಿರಗಳೂ, ಸಾಹಿತ್ಯ ಕೂಟಗಳೂ ಇದ್ದು ಹಲವಾರು ಪುಸ್ತಕಗಳು ಪ್ರಕಟವಾಗುವುವಲ್ಲದೆ ನಗರ ಗ್ರಾಮಗಳಲ್ಲೆಲ್ಲಾ ನಾಡಹಬ್ಬವೇ ಮುಂತಾದ ಕನ್ನಡದ ಅನೇಕ ಚಟುವಟಿಕೆಗಳು ಆಗಾಗ ನಡೆಯುತ್ತಿವೆ.

ಕಾಸರಗೋಡಿನ ಎಲ್ಲಾ ಕನ್ನಡ ಚಟುವಟಿಕೆಗಳಿಗೂ ಕಳಸವಿಟ್ಟಂತೆ, ಇಲ್ಲಿನ ಪೆರಡಾಲದಲ್ಲಿರುವ ಎಂ. ಎಸ್. ಕಾಲೇಜ್ ಎಂಬ ಪ್ರಾಚೀನ ಸಂಸ್ಥೆ ಮೆರೆದಿದೆ. ಈ ಸಂಸ್ಥೆಯು ಮದ್ರಾಸ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಇಡೀ ಸಂಸ್ಥಾನದಲ್ಲಿಯೇ ಮೊತ್ತಮೊದಲಾಗಿ ವಿದ್ವತ್ಪರೀಕ್ಷೆಗೆ ತರಬೇತು ಮಾಡಿದ ಕಲಾಶಾಲೆಯಾಗಿರುವುದು. ಈ ಕಾಲೇಜಿನಲ್ಲಿ ಉತ್ತೀರ್ಣರಾದ ಕನ್ನಡ ಭಾಷಾ ಪಂಡಿತರೇ, ಹೆಚ್ಚಾಗಿ ಮದ್ರಾಸ್ ಪ್ರಾಂತದ ಅನೇಕ ಕಾಲೇಜು, ಹೈಸ್ಕೂಲ್ ಮುಂತಾದವುಗಳಲ್ಲಿ ಪಂಡಿತರಾಗಿರುವರೆಂದರೆ ಈ ಸಂಸ್ಥೆಯಿಂದಾಗಿ ಆದ ಕನ್ನಡದ ಸೇವೆಯ ಮಹತ್ವದ ಅರಿವಾಗದೆ ಇರದು. ಈ ಕಾಲೇಜಿನ ಹಿರಿಯ ಕನ್ನಡ ಪಂಡಿತರಾಗಿರುವ ಶ್ರೀ ಪೆರಡಾಲ ಕೃಷ್ಣಯ್ಯನವರಂತಹ ಕನ್ನಡ ಭಾಷಾ ಪಂಡಿತರನ್ನು ಸಮಸ್ತ ಕನ್ನಡ ನಾಡಿನಲ್ಲಾದರೂ ಬಹುಮಂದಿಯನ್ನು ನಾವು ಕಾಣಲಾರೆವು. ಇಂತಹ ಕಾಲೇಜೊಂದು, ಈ ರೀತಿಯ ಪ್ರಾಮುಖ್ಯ ಕನ್ನಡ ಸಂಸ್ಥೆಯೊಂದು, ಕಾಸರಗೋಡು ತಾಲೂಕಿನಲ್ಲಿದ್ದು ಈ ಸಂಸ್ಥೆಯ ಮೂಲಕ ಕನ್ನಡದ ಪ್ರಚಾರ ಬಹುಮುಖವಾಗಿ ನಡೆಯುತ್ತ ಬಂದಿದೆ. ಇದು ಮಾತ್ರವಲ್ಲದೆ, ಈ ತಾಲೂಕಿನ ಮಂಜೇಶ್ವರ, ಪೆರಡಾಲ, ಪೆರ್ಲ, ಕೊಡ್ಲಮೊಗರು, ಕಾಸರಗೋಡು ಮುಂತಾದ ಪ್ರಾಮುಖ್ಯ ಕೇಂದ್ರ ಸ್ಥಳಗಳಲ್ಲಿರುವ ಹೈಸ್ಕೂಲುಗಳಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಿ ಅಲ್ಲಿ ಅನೇಕ ಕನ್ನಡ ವಿದ್ವಾಂಸರು ದುಡಿಯುತ್ತಿರುವರು. ಆ ಸಂಸ್ಥೆಗಳೆಲ್ಲವೂ ಕನ್ನಡ ಸಾಹಿತ್ಯ ಸರಸ್ವತಿಯ ಆರಾಧನಾ ಮಂದಿರಗಳಂತಿವೆ. ಇಂತು ಇಲ್ಲಿ ಹೆಸರಿಸಿದ, ಇನ್ನೂ ಹೆಸರಿಸಲು ಬಾಕಿ ಉಳಿದ, ಅನೇಕ ಕನ್ನಡ ವಿದ್ವಾಂಸರೂ, ಕನ್ನಡ ಸಂಸ್ಥೆಗಳೂ ಕಾಸರಗೋಡು ತಾಲೂಕಿನಲ್ಲಿ, ಕನ್ನಡಕ್ಕಾಗಿ ನಿರಂತರ ದುಡಿಯುತ್ತಿರಲು, ಕನ್ನಡ ನುಡಿಯ ಮೂಲಕ ತಮ್ಮ ಜೀವನ ವಿಕಾಸವನ್ನು ಕಂಡಿರಲು, ಅವರೆಲ್ಲರನ್ನೂ ಕೇರಳಾಂತರ್ಗತ ಮಾಡಿ ಈ ರೀತಿ ಒಮ್ಮೆಲೇ ಕಣ್ಣು ಕಟ್ಟಿ ಕಟ್ಟರಣ್ಯದಲ್ಲಿ ಬಿಟ್ಟಂತೆ ಮಾಡುವುದು ಸರ್ವಥಾ ಸಲ್ಲದು. ಇಂತಹ ಗಂಡಾಂತರವನ್ನು, ಕನ್ನಡದ ಮುನ್ನಡೆಗೆ ಉಂಟಾದೀತೊಡಕನ್ನು, ಕಾಸರಗೋಡಿನ ಕನ್ನಡಿಗರು ಮಾತ್ರವಲ್ಲ ಇಡೀ ಜಿಲ್ಲೆಯ, ಅಖಿಲ ಕರ್ನಾಟಕದ ಕನ್ನಡಿಗರು ಸಹ ಪ್ರತಿಭಟಿಸದಿರಲಾರರೆಂದು ನಾವು ನಂಬುತ್ತೇವೆ. ಎಲ್ಲರಲ್ಲಿ ಈ ಪ್ರಾರ್ಥನೆಯನ್ನು ಸಲ್ಲಿಸುತ್ತೇವೆ.

ಫಲ ಸಮೃದ್ಧಿ, ಜಲ ಸಮೃದ್ಧಿ ಮುಂತಾದವುಗಳಿಂದ ಕಾಸರಗೋಡು ಸಂಪತ್ಸಮೃದ್ಧವಾಗಿರುವಂತೆ, ಕನ್ನಡದ ವಿಶಿಷ್ಟ ಕಲೆಯಾದ ಯಕ್ಷಗಾನದ ಜನ್ಮಭೂಮಿಯೆಂಬುದರಿಂದಲೂ, ಪಾರ್ತಿಸುಬ್ಬ, ಗೋವಿಂದ ಪೈಗಳಂತಹ ಕವಿವರೇಣ್ಯರ ಹುಟ್ಟು ನಾಡೆಂಬುದರಿಂದಲೂ, ಅನೇಕ ಪ್ರಖ್ಯಾತ ಕನ್ನಡ ಕವಿ, ಕತೆಗಾರ, ಲೇಖಕರಿಂದಲೂ ಈ ತಾಲೂಕಿನಲ್ಲಿ ಪ್ರಚಾರವಾಗಿರುವ ಪತ್ರಿಕೆ, ಪ್ರಕಟಣಾ ಸಂಸ್ಥೆ, ಸಾಹಿತ್ಯ ಸಭೆ ಇನ್ನು ಅನೇಕ ಕನ್ನಡ ವಿದ್ಯಾ ಸಂಸ್ಥೆಗಳ ಮೂಲಕವೂ ಕನ್ನಡದ ವಿದ್ವಾಂಸರಿಂದಲೂ ಈ ಭಾಗವು ಆರ್ಥಿಕ ಸಂಪತ್ತಿನಂತೆ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂಪತ್ತಿನ ದೃಷ್ಟಿಯಿಂದಲೂ ಸಮೃದ್ಧವಾದ ಪ್ರದೇಶವೆಂಬುದನ್ನು ಕನ್ನಡಿಗರೆಲ್ಲರೂ ಅರ್ಥ

ಮಾಡಿಕೊಂಡಲ್ಲಿ, ಕಾಸರಗೋಡು ತಾಲೂಕನ್ನುಳಿದ ಕನ್ನಡನಾಡು ಎಷ್ಟು ಬಡನಾಡೆಂಬುದನ್ನು ಅರಿತುಕೊಂಡಲ್ಲಿ, ಕಾಸರಗೋಡು ತಾಲೂಕು ಕೇರಳಕ್ಕೆ ಸೇರುವುದರಿಂದ ಇಲ್ಲಿರುವ ಕನ್ನಡಿಗರಿಗೆ ಆಗುವ ಅತ್ಯಂತ ಕಷ್ಟದ ಜತೆಗೆ ಇಡಿಯ ಕನ್ನಡನಾಡಿಗೇ ಅಪಾರ ನಷ್ಟ ಸಂಭವಿಸಲಿದೆಯೆಂದು ತಿಳಿದು ಎಲ್ಲರೂ ಇಂದು ಎಚ್ಚರಗೊಳ್ಳದಿರಲಾರರು. ತಡವಾಗಿಯಾದರೂ ಕನ್ನಡಿಗರು ಎಚ್ಚತ್ತು ಕಾಸರಗೋಡನ್ನು ಕರ್ಣಾಟಕದಲ್ಲಿ ಸರ್ವಥಾ ಉಳಿಸಿಕೊಳ್ಳುವುದು ಅವರ ಪವಿತ್ರ ಕಾರ್ಯವಾಗಿದೆ. ಇಂತಹ ಉದ್ಯಮದಲ್ಲಿ ಭಗವಂತನು ಕನ್ನಡಿಗರಿಗೆ ಸರ್ವ ಶಕ್ತಿಸಾಮರ್ಥ್ಯಗಳನ್ನು ದಯಪಾಲಿಸಲೆಂದು ಎಲ್ಲರೂ ಪ್ರಾರ್ಥಿಸಬೇಕಾಗಿದೆ. ಮದ್ರಾಸು ಶಾಸನ ಸಭೆಯಲ್ಲಿ, ಕಳೆದ ತಿಂಗಳು, ಪ್ರಾಂತ ಪುನಾರಚನಾಯೋಗದ ಕುರಿತು ಚರ್ಚಿಸುತ್ತಿದ್ದಾಗ, ನಮ್ಮ ಜಿಲ್ಲೆಯ ಸಮಸ್ತ ಸದಸ್ಯರೂ ಕಾಸರಗೋಡನ್ನು ಕೇರಳದಲ್ಲಿ ಸೇರಿಸಿದುದರ ಕುರಿತು ತೀವ್ರ ಪ್ರತಿಭಟಿಸಿ ಮಾತನಾಡಿದಂತೆ, ಶ್ರೀ ಕೊಳ್ಕೆಬೈಲು ಸಂಜೀವ ಶೆಟ್ಟರು ಕೂಡಾ ಮಾತನಾಡುತ್ತಾ, ಕನ್ನಡದ ರಾಷ್ಟ್ರಕವಿ ಶ್ರೀ ಗೋವಿಂದ ಪೈಗಳಿರುವ ಭೂಭಾಗವು ವರದಿಯಂತೆ ಕೇರಳಾಂತರ್ಗತವಾಗಬೇಕಾಗುತ್ತದೆಂಬುದು ಒಂದು ವಿಪರ್ಯಾಸವೆಂದಾಗ, ಇಡೀ ಶಾಸನಸಭೆಯೇ ಗಹಗಹಿಸಿತೆಂದು ಮದ್ರಾಸಿನ ಪ್ರಮುಖ ಪತ್ರಿಕೆಗಳಲ್ಲಿ ವರದಿಯಾಗಿರುವುದು.

—ಕನ್ನಡದ ಗಂಡು ಮೆಟ್ಟಾದ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಲು ವರದಿ ಮಾಡಿದ ಆಯೋಗದವರ ಬಾಲಿಶತ್ವಕ್ಕೆ ಮದ್ರಾಸ್ ಪ್ರಾಂತದ ಚುನಾಯಿತ ಪ್ರತಿನಿಧಿಗಳು ಸಲ್ಲಬೇಕಾದ ಬೆಲೆ ಕೊಟ್ಟಿದ್ದಾರೆಂಬುದು ಅದರಿಂದ ನಮಗೆ ಊಹಿಸಬಹುದಾಗಿತ್ತು! ಆ ಮೇಲೆ ಆ ಶಾಸನ ಸಭೆಯು ಮಂಜೂರು ಮಾಡಿದ ಪ್ರಚಂಡ ಬಹುಮತದ ನಿರ್ಣಯದಿಂದ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಬಹುಕಾಲದ ಆಡಳಿತದ ಅನುಭವವುಳ್ಳ ಹಾಗೂ ಇನ್ನು ಮುಂದಿನ ಪ್ರಾಂತ ವಿಭಜನೆಯಲ್ಲಿ ಕಾಸರಗೋಡಿನ ಕುರಿತು ಯಾವುದೇ ಸ್ವಾರ್ಥಾಭಿಲಾಷೆಯಿಲ್ಲದೆ ಮದ್ರಾಸ್ ಶಾಸನ ಸಭೆಯು ಇಂತು ಕಾಸರಗೋಡಿನ ಕನ್ನಡಿಗರ ಬಗ್ಗೆ ಬೆಂಬಲ ನೀಡಿದುದರ ಕುರಿತು ನಾವೆಲ್ಲರೂ ಅವರಿಗೆ ಅತ್ಯಂತ ಋಣಿಗಳಾಗಿರುವೆವು. ಮದ್ರಾಸ್ ಶಾಸನ ಸಭೆಯಲ್ಲಿ ಕಾಸರಗೋಡಿನ ಕನ್ನಡತನದ ಕುರಿತು ಪ್ರಬಲವಾದ ವಾದವನ್ನು ಮಂಡಿಸಿದ ನಮ್ಮ ಜಿಲ್ಲೆಯ ಸಕಲ ಶಾಸನ ಸಭಾ ಸದಸ್ಯರಿಗೂ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ಮಂತ್ರಿಮಂಡಲದಲ್ಲಿ ಬೆಂಬಲಿಸಿದ ಶ್ರೀ ಎ. ಬಿ. ಸೆಟ್ಟರಿಗೂ ಕೃತಜ್ಞತೆಯನ್ನು ಸಲ್ಲಿಸಲು ನಾವು ಮರೆಯಲಾರೆವು. ಇದೇ ಬೆಂಬಲವು ನಮಗೆ ಪಾರ್ಲಿಮೆಂಟಿನಲ್ಲಿಯೂ ಶ್ರೀಗಳಾದ ಬೆನಗಲ್, ಮಲ್ಯ, ಹೆಗ್ಗಡೆಯವರ ಮೂಲಕ ದೊರೆತು ನಮ್ಮ ನ್ಯಾಯಕ್ಕೆ ಸಂಪೂರ್ಣ ವಿಜಯದೊರಕುವಂತಾಗಲೆಂದು ನಾವಿಂದು ಪ್ರಾರ್ಥಿಸುವೆವು. ಆಗ ಇನ್ನೊಮ್ಮೆ ದ್ವಿಗುಣಿತ ಉತ್ಸಾಹದಿಂದ, ಇತೋಪ್ಯತಿಶಯ ಸ್ಫೂರ್ತಿಯಿಂದ ಕಾಸರಗೋಡಿದಲ್ಲಿ ಕನ್ನಡದ ಚಟುವಟಿಕೆಗಳು ಮುಖ್ಯತಃ ಸಾಹಿತ್ಯ ಸೇವೆ ನೆರವೇರುವಂತಾಗುವುದೆಂದೂ, ಪಾರ್ತಿಸುಬ್ಬ, ಗೋವಿಂದ ಪೈಗಳಂತಹ ಸಾಹಿತ್ಯವರೇಣ್ಯರು ಈ ಪುಣ್ಯ ನೆಲದಲ್ಲಿ ಮೆರೆಯುವರೆಂದೂ ನಾವು ಹಾರೈಸುವೆವು.★

CROWN RUBBER STAMP CO.
*Quality*
RUBBER STAMP MAKERS
*Balmatta Road, Mangalore*
ESTD:1926. PHONE: 203




